O.S 288/2022

Pw1

ದಿನಾಂಕ 17.06.2025.ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ 2 ನೇ ಪ್ರತಿವಾದಿ ಪರ ಶ್ರೀ ಬಿ.ಆರ್. ಕೆ. ವಕೀಲರಿಂದಃ**

ನಿಡಿ-1 ರಲ್ಲಿ ಇರುವ ಅಳತೆಯು ಸರಿಯಾಗಿ ಇದೇಯಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ನಿಪಿ-2 ರಲ್ಲಿ ವಿಲ್ ಆಧಾರದ ಮೇಲೆ ನಿಮ್ಮ ಹೆಸರನ್ನು ಸೇರ್ಪಡಿಸಿರುವ ಬಗ್ಗೆ ನಮೂದು ಇದೆ ಎಂದರೆ ಹೌದು ಎಂದು ನುಡಿದಿರುತ್ತಾರೆ. ನಿಪಿ-2 ರ ಪ್ರಕಾರ 48*12 ಅಡಿ ಸ್ವತ್ತನ್ನು ನಿಮ್ಮ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿ. ನಿಪಿ-2 ಆದ ನಂತರ ಲಕ್ಷ್ಮಮ್ಮ ರವರ ಹೆಸರಿಗೆ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಗರಸಭೆಯಿಂದ ನಿಮ್ಮ ಹೆಸರಿಗೆ 48*12 ಅಡಿ ಜಾಗ ಖಾತೆ ಆಗಿರುವ ಬಗ್ಗೆ ದಾಖಲೆ ನೀಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ನೀವು ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಕಟ್ಟಡವನ್ನು ಕಟ್ಟುತ್ತಿದ್ದೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ಕಟ್ಟಡ ನಿರ್ಮಿಸಲು ನಗರಸಭೆಯಿಂದ ಲೈಸೆನ್ಸ್ ತೆಗೆದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಎಷ್ಟು ವರ್ಷಗಳಿಂದ ಕಟ್ಟಡ ಕಟ್ಟುತ್ತಿದ್ದೀರಾ ಎಂದರೆ ದಾವಾ ಹೂಡಿದ ನಂತರ ನಿಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನೀವು ಯಾವುದೇ ಪರವಾನಗೆಯನ್ನು ಪಡೆದುಕೊಳ್ಳದ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಿಂದ 4 ರಲ್ಲಿ ಕಾಣುವ ಮನೆಯಲ್ಲಿ ಪ್ರತಿವಾದಿಯು ವಾಸವಿದ್ದು ಅದರ ವಿಸ್ತೀರ್ಣ 48*12 ಅಡಿ ಇರುತ್ತದೆ ಎಂದರೆ ಪ್ರತಿವಾದಿಯು ವಾಸವಿಲ್ಲ ಅದರ ವಿಸ್ತೀರ್ಣ 48*12 ಅಡಿ ಇರುತ್ತದೆ ಹಾಗೂ ನಾವು ವಾಸವಾಗಿದ್ದೇವೆ ಎಂದು ನುಡಿದಿರುತ್ತಾರೆ. ನಿಡಿ-3 ರಲ್ಲಿ ಇರುವ ಮನೆಯ ಚಕ್ಕುಬಂದಿ ಪೂರ್ವಕ್ಕೆ ಗಂಗಭೈರಯ್ಯ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿಮ್ಮ ಉಳಿಕೆ ಜಮೀನು ಮತ್ತು ಲಕ್ಷ್ಮಮ್ಮರವರ ಮನೆ ಮತ್ತು ದಕ್ಷಿಣಕ್ಕೆ ಹುಚ್ಚಯ್ಯ ಮತ್ತು ಕೆಂಪನಂಜಯ್ಯ ರವರ ಮನೆ ಎಂದರೆ, ಉತ್ತರಕ್ಕೆ ಲಕ್ಷ್ಮಮ್ಮನವರ ಮನೆ ಇದ್ದು ನಂತರ ಉಳಿಕೆ ಜಾಗ ಇರುತ್ತದೆ ಎಂದು ನುಡಿದಿರುತ್ತಾರೆ. ನಿಡಿ -3 ರಲ್ಲಿ ಇರುವ ಜಾಗವನ್ನು ಸ್ಲಮ್ ಬೋರ್ಡ್ ನವರು ಸ್ಲಮ್ ಏರಿಯಾ ಎಂದು ಘೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಡಿ-3 ರಲ್ಲಿ

ಇರುವ ಮನೆ ಮತ್ತು ಜಾಗದಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರನ್ನು ಸರ್ಕಾರದಿಂದ ಸ್ಲಮ್ ನಿವಾಸಿಗಳು ಎಂದು ಘೋಷಣೆ ಮಾಡಿರುರತ್ತಾರೆ ಎಂದರೆ ನಾವು ಸಹ ಅಲ್ಲೆ ಇರುತ್ತೇವೆ ಎಂದು ನುಡಿದಿರುತ್ತಾರೆ. ನಿಡಿ-2 ರವರಿಗೆ ಸ್ಲಮ್ ಬೋರ್ಡ್ ನಿಂದ ಮನೆ ಕಟ್ಟಲು ಮಂಜೂರಾತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ಸದರಿ ಕಾರಣಕ್ಕಾಗಿ ರೂ.10,000 ಹಣವನ್ನು ಡೆಪೋಸಿಟ್ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸ್ಲಮ್ ಬೋರ್ಡ್ ನಿಂದ ನಿಡಿ-2 ರಿಂದ 4 ರಲ್ಲಿ ಕಾಣುವಂತೆ ಕಟ್ಟಡ ನಿರ್ಮಾಣಕ್ಕಾಗಿ ಪಿಲ್ಲರ್ ಹಾಕಿರುತ್ತಾರೆ ಎಂದರೆ ಸರಿಯಲ್ಲ, ಮುಂದುವರೆದು ನಾವು ಹಾಕಿರತ್ತೇವೆ ಎಂದು ನುಡಿದಿರುತ್ತಾರೆ. ಪ್ರತಿವಾದಿ 2 ರವರಿಗೆ ಮನೆ ಕಟ್ಟಿ ಕೊಡುವ ಕಾರಣದಿಂದ ಅದನ್ನು ಸಹಿಸಲು ಆಗದೆ ತೊಂದರೆ ನೀಡುವ ಸಲುವಾಗಿ ಈ ದಾವಾ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಈ ದಾವಾ ಚಾಲ್ತಿಯಲ್ಲಿದೆ ಎಂದು ಹೇಳಿ ಸದರಿ ಮನೆ ಕಟ್ಟುವ ಕೆಲಸವನ್ನು ನಿಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಮನೆ ಕಟ್ಟುವ ಕೆಲಸವನ್ನು ನಿಲ್ಲಿಸಿರುವ ಕಾರಣದಿಂದ ಪ್ರತಿವಾದಿ 2 ರವರ ಮನೆಗೆಲಸ ನಡೆಯುತ್ತಿಲ್ಲ ಎಂದರೆ ಸರಿಯಲ್ಲ. ನೀವು ಎಂದಿಗೂ ಮನೆಗೆಲಸವನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀವು ಸ್ವಾ ಧೀನದಲ್ಲಿ ಇರುತ್ತೀರಿ ಎಂದು ತೋರಿಸಲು ಹಾಗೂ ನಿಮ್ಮ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವಾ ಹೂಡಿ ಸುಳ್ಸು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ *1* ರವರ ಪರ ವಕೀಲರು ವಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**